ಶಾಲಾ ಕಟ್ಟಡ, ಸೇತುವೆ ಕಟ್ಟುವುದು, ರಸ್ತೆ ನಿರ್ಮಾಣ ಮುಂತಾದ ಕಾರ್ಯಗಳಿಗೆ ಪ್ರಮಾಣಕ್ಕೆ ಅನುಗುಣವಾಗಿ ಅನುದಾನ ಸಿಕ್ಕಿಲ್ಲದೆ ಇರುವ ಬಗ್ಗೆ

೫೨೨. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿಯು, ರಾಜ್ಯದಲ್ಲಿಯ ಒಂದು ದೊಡ್ಡ ತಾಲ್ಲೂಕು ಆಗಿದ್ದು, ಇಲ್ಲಿ ನಾಲ್ಕು ರೆವಿನ್ಯೂ ಫಿರ್ಕಾಗಳಿವೆ. ಇವುಗಳನ್ನು ಮೂರು ಅಸೆಂಬ್ಲಿ ಮತಕ್ಷೇತ್ರಗಳಿಗೆ ಕೂಡಿಸಲಾಗಿದೆ ಆದರೆ ಹುಡ್ಕೋ, ಎನ್‌ಆರ್‌ಡಬ್ಲ್ಯೂಎಸ್ ಆಯ್‌ಆರ್‌ಡಿಪಿ ಮತ್ತು ಎನ್‌ಆರ್‌ಇಪಿ ಈ ಯೋಜನೆಗಳಲ್ಲಿ ಶಾಲಾ ಕಟ್ಟಡ ಸೇತುವೆ ಕಟ್ಟುವುದು, ರಸ್ತೆ ನಿರ್ಮಾಣ ಮುಂತಾದ ಕಾರ್ಯಗಳಿಗೆ ಪ್ರಮಾಣಕ್ಕೆ ಅನುಗುಣವಾಗಿ ಅನುದಾನ ಸಿಕ್ಕಿಲ್ಲವೆಂಬುದು ಸರಕಾರದ ಗಮನಕ್ಕೆ ಬಂದಿದೆಯೆ ? ಅನುದಾನವನ್ನು ತಾಲೂಕುವಾರು ಬಿಡುಗಡೆ ಮಾಡಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ಬಿಡುಗಡೆ ಮಾಡಿಲ್ಲ.

ಆ) ಸರಕಾರವು ಪ್ರಸ್ತುತ ಪದ್ಧತಿಯಂತೆ ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಹಂಚಲು ಇಚ್ಛಿಸುತ್ತಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಸತಿ ಮಂತ್ರಿಗಳು).—

ಅ) ಹೌದು, ಸರಕಾರಕ್ಕೆ ಈ ವಿಷಯ ತಿಳಿದಿದೆ. ಇನ್ನು ಮುಂದೆ ಉಡುಪಿ ತಾಲ್ಲೂಕಿಗೆ ಪ್ರಮಾಣಕ್ಕೆ ಅನುಸಾರವಾಗಿ ಎನ್‌ಆರ್‌ಇಪಿ ಮತ್ತು ಎನ್‌ಆರ್‌ಡಬ್ಲ್ಯೂಎಸ್ ಯೋಜನೆಗಳ ಅಡಿಯಲ್ಲಿ ಅನುದಾನವನ್ನು ಹಂಚಲಾಗುವುದು ಎನ್‌ಆರ್‌ಇಪಿ ಯೋಜನೆಯ ಅಡಿಯಲ್ಲಿ ಈ ವರ್ಷ ಜಿಲ್ಲಾವಾರು ಅನುದಾನ (ರೂ. ೭೨.೨೨ ಲಕ್ಷಗಳು) ಪೈಕಿ ೨೩ : ಅನುದಾನ (ರೂ. ೧೬.೬೧ ಲಕ್ಷ) ಪಡೆಯಲಿದೆ ಎನ್‌ಆರ್‌ಡಬ್ಲ್ಯೂಎಸ್ ಯೋಜನೆಯ ಅಡಿಯಲ್ಲಿ ಜಿಲ್ಲಾವಾರು ಅನುದಾನ ರೂ. ೧೯.೯೧ ಲಕ್ಷಗಳ ಪೈಕಿ ೧೭.೪% ರೂ. ೩.೪೭ ಲಕ್ಷ) ಪಡೆಯಲಿದೆ.

ಆ) ಇಲ್ಲ

ಬೆಂಗಳೂರಿನಲ್ಲಿ ರೆವಿನ್ಯೂ ನಿವೇಶನಗಳನ್ನು ಕ್ರಮಬದ್ಧಗೊಳಿಸುವ ಬಗ್ಗೆ.

೫೪೧. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಬೆಂಗಳೂರು ನಗರದಲ್ಲಿ ರೆವಿನ್ಯೂ ನಿವೇಶನಗಳ ಮಾಲೀಕರು ನಿವೇಶನಗಳ ನೋಂದಾಣಿಕೆಯ ಬಗ್ಗೆ ಮತ್ತು ಕೊಂಡುಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಹಾಗಿದ್ದಲ್ಲಿ ಎಷ್ಟು ರೆವಿನ್ಯೂ ನಿವೇಶನ ಮಾಲೀಕರು ಇದ್ದಾರೆ ?

೩) ಅನೇಕ ವರ್ಷಗಳಿಂದ ರೆವಿನ್ಯೂ ನಿವೇಶನ ಮಾಲೀಕರು ತಮ್ಮ ನಿವೇಶನಗಳನ್ನು ಸಕ್ರಮಗೊಳಿಸುವಿಕೆಗೆ ಕೇಳಿರುತ್ತಾರೆಯೇ ?

೪) ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸಲು ಸರ್ಕಾರವು ಯಾವ ನಿಯಮಾವಳಿಯನ್ನು ಅಳವಡಿಸಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು).—

೧) ಹೌದು.

೨) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಡತಗಳ ಪ್ರಕಾರ ೧೨,೧೧೪.

೩) ಹೌದು.

೪) ಸಕ್ರಮಗೊಳಿಸಲು ಅನುಸರಿಸಬೇಕಾದ ನಿಯಮಗಳ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.